Published in Kannada News Paper (Prajavani) dated 2nd July 2010 regarding our Temple Celebration at Sumsay (with Temple Picture) – English Translation.

## SUMSAY: SRI GANAPATHY ASTABANDHA CELEBRATION

Sumsay (Kalasa): Sri Sarva Siddhi Maha Ganapathy Temple Astabandha Brahma Kalashotsava programme commenced at Joonktollee Tea & Industries Ltd., Sumsay on Sunday.

Near about one crore Rupees has been spent for the construction of the temple. In that temple Maha Ganapathy pooja, Astabandha religious programmes were performed. New Clothes were distributed to all the employees of the Estate.

Ganahoma, Bimbashuddhi, Akshatha Homa, Vastu Homa, Peetadhivasa Homa, Navashakthi Homas' were performed. On Monday Devatha Prathishte, Ashtabandha Samyojane, Prathishtadhivasa, Kalasha Prathishte, Adhivasa Homa were performed.

The Chairman of Joonktollee Tea & Industries Ltd., Sri. G.D. Bangur & Smt Pushpa Bangur had participated in this religious function at Sumsay Sri Thrairathna Bhavan. Gold & Silver Coins were distributed as a token of appreciation and reward to those who have rendered the service for the construction of the temple and also to the Managerial Staff, Staff & Non-staff of the Estate in lieu of their well performance.

The Executive Vice Chairman of Joonktollee Tea & Industries Ltd., Sri Hemant Bangur in his speech thanked all those who have worked hard for the development of the Company. He has added that the newly built temple will be kept open for the Darshan of devotees on all the days.

Sri G. Bheemeshawara Joshi, Dharmakartharu, Srikshetra, Horanadu, in his speech told that the newly built Ganapathy temple shows the affection of Bangur families towards the religious activities.

The Senior General Manager of Joonktollee Tea & Industries Ltd., Goomankhan Estate, Sri Rajkumar Wilson was specially honoured at this juncture.

Sri. Ramanarayana Joshi, Smt. Rajalakshmi B. Joshi and other local devotees participated. Kalashabhisheka and Kumbhabhisheka's was performed on Tuesday.

## ಅಲಂಕಾರ



ಕಳಸ ಸಮೀಪದ ಸಂಸೆಯ ಜೂಂಕ್‌ಟೋಲಿ ಚಹಾ ತೋಟದಲ್ಲಿ ನಿರ್ಮಾಣಗೊಂಡಿರುವ ಗಣಪತಿ ದೇವಸ್ಥಾನವನ್ನು ಅಷ್ಟಬಂಧದ ಅಂಗವಾಗಿ ಹೂಗಳಿಂದ ಅಲಂಕರಿಸಲಾಗಿದೆ.

M**+

3

# ಸಂಸೆ: ಗಣಪತಿ ಅಷ್ಟಬಂಧ ಸಂಭ್ರಮ

ಸಂಸೆ(ಕಳಸ): ಇಲ್ಲಿಗೆ ಸಮೀಪದ ಜೂಂಕ್‌ಟೋಲಿ ಚಹಾ ತೋಟದೊಳಗೆ ನಿರ್ಮಿಸಲಾಗಿರುವ ಸರ್ವಸಿದ್ಧಿ ಮಹಾ ಗಣಪತಿ ದೇವಸ್ಥಾನದ ಅಷ್ಟ ಬಂಧ ಬ್ರಹ್ಮಕಲಶೋತ್ಸವದ ಕಾರ್ಯ ಕ್ರಮಗಳು ಭಾನುವಾರದಿಂದ ಚಾಲನೆ ಪಡೆದಿವೆ.

ಸುಮಾರು 1 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಸುಂದರ ದೇಗುಲದಲ್ಲಿ ಮಹಾಗಣಪತಿ ಪೂಜೆಯೊಂದಿಗೆ ಅಷ್ಟಬಂಧದ ಧಾರ್ಮಿಕ ವಿಧಿ ಆರಂಭಗೊಂಡಿತ್ತು. ಚಹಾ ತೋಟದ ಕಾರ್ಮಿಕರಿಗೆ ಬಟ್ಟೆ ಹಂಚುವ ಕಾರ್ಯಕ್ರಮ ನಡೆಯಿತು.

ಗಣಹೋಮ, ಬಿಂಬ ಶುದ್ಧಿ, ಅಕ್ಷತಾ ಹೋಮ, ವಾಸ್ತು ಹೋಮ, ಪೀಠಾಧಿವಾಸ ಹೋಮ, ನವಶಕ್ತಿ ಹೋಮಗಳನ್ನೂ ವಿಧಿವತ್ತಾಗಿ ನಡೆಸಲಾಗಿತ್ತು. ಸೋಮವಾರ ದೇವತಾ ಪ್ರಾರ್ಥನೆ, ಅಷ್ಟಬಂಧ ಸಂಯೋಜನೆ, ಪ್ರತಿಷ್ಠಾಧಿವಾಸ, ಕಲಶ ಪ್ರತಿಷ್ಠೆ ಮತ್ತು ಅಧಿವಾಸ ಹೋಮ ಸಾಂಗವಾಗಿ ನೆರವೇರಿತು.



ಗಣಪತಿ ದೇವಸ್ಥಾನದ ಅಷ್ಟಬಂಧದ ಪ್ರಯುಕ್ತ ಕಳಸ ಸಮೀಪದ ಸಂಸೆಯ ತ್ರೈರತ್ನ ಭವನದಲ್ಲಿ ನಡೆದ ಧಾರ್ಮಿಕ ಸಭೆಯಲ್ಲಿ ಜೂಂಕ್‌ಟೋಲಿ ಸಂಸ್ಥೆಯ ಅಧ್ಯಕ್ಷ ಜಿ.ಡಿ.ಬಂಗೂರ್ ದಂಪತಿ, ಉಪಾಧ್ಯಕ್ಷ ಹೇಮಂತ್ ಬಂಗೂರ್, ಹೊರನಾಡಿನ ಜಿ.ಭೀಮೇಶ್ವರ ಜೋಷಿ, ರಾಮನಾರಾಯಣ ಜೋಷಿ ಇದ್ದರು.

ಮಧ್ಯಾಹ್ನ ಸಂಸೆಯ ತ್ರೈರತ್ನ ಭವನದಲ್ಲಿ ನಡೆದ ಧಾರ್ಮಿಕ ಸಭೆಯಲ್ಲಿ ಜೂಂಕ್‌ಟೋಲಿ ಸಂಸ್ಥೆಯ ಅಧ್ಯಕ್ಷ ಜಿ.ಡಿ.ಬಂಗೂರ್ ಮತ್ತು ಪುಷ್ಪ ಬಂಗೂರ್ ದಂಪತಿ ಭಾಗವಹಿಸಿದ್ದರು. ದೇವಸ್ಥಾನದ ನಿರ್ಮಾಣದಲ್ಲಿ ಸಹಕರಿಸಿದವರಿಗೆ ಮತ್ತು ಚಹಾ ತೋಟದ ಕಾರ್ಯನಿರ್ವಹಣೆಯಲ್ಲಿ ಸಾಧನೆ ತೋರಿದ ನೌಕರರಿಗೆ ಬಂಗೂರ್ ಕುಟುಂಬವು ಚಿನ್ನ, ಬೆಳ್ಳಿಯ ಉಡುಗೊರೆ ನೀಡಿದ್ದು ವಿಶೇಷವಾಗಿತ್ತು.

ಜೂಂಕ್‌ಟೋಲಿ ಸಂಸ್ಥೆಯ ಅಧ್ಯಕ್ಷ ಹೇಮಂತ್ ಬಂಗೂರ್ ಮಾತನಾಡಿ, ಸಂಸ್ಥೆಯ ಒಳಿತಿಗಾಗಿ ಕಾರ್ಯನಿರ್ವಹಿಸುತ್ತಿರುವ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.ನೂತನವಾಗಿ ನಿರ್ಮಿಸಲಾಗಿರುವ ಮಹಾಗಣಪತಿ ದೇವಸ್ಥಾನದಲ್ಲಿ ನಿತ್ಯ ಪೂಜೆ ನಡೆಯಲಿದ್ದು ಭಕ್ತರು ಭಾಗವಹಿಸಬಹುದಾಗಿದೆ ಎಂದರು.

ಹೊರನಾಡಿಡು ಕ್ಷೇತ್ರದ ಜಿ. ಭೀಮೇಶ್ವರ ಜೋಷಿ ಮಾತನಾಡಿ,ಅತ್ಯಂತ ಸುಂದರವಾಗಿರುವ ನೂತನ ದೇವಸ್ಥಾನ ಬಂಗೂರ್ ಕುಟುಂಬದ ಧಾರ್ಮಿಕ ಪ್ರವೃತ್ತಿಗೆ ಕನ್ನಡಿ ಹಿಡಿಯುವಂತಿದೆ ಎಂದು ಶ್ಲಾಘಿಸಿದರು.

ಸಂಸ್ಥೆಯ ಜನರಲ್ ಮ್ಯಾನೇಜರ್ ರಾಜ್‌ಕುಮಾರ್ ವಿಲ್ಸನ್ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ರಾಮನಾರಾಯಣ ಜೋಷಿ, ರಾಜಲಕ್ಷ್ಮಿ ಜೋಷಿ ಮತ್ತಿತರರು ಭಾಗವಹಿಸಿದ್ದರು. ದೇವಸ್ಥಾನದಲ್ಲಿ ಮಂಗಳವಾರ ಕಲಶಾಭಿಷೇಕ ಮತ್ತು ಕುಂಭಾಭಿಷೇಕ ನಡೆಯಲಿದೆ.